ಅ) ಎರಡು

ಇ) ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಗೋವಾ ರಾಜ್ಯಕ್ಕೆ ಆಗಮಿಸುತ್ತಾರೆ. ಇವರಿಗೆ ಕರ್ನಾಟಕ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಅವರನ್ನು ಕರ್ನಾಟಕಕ್ಕೆ ಆಕರ್ಷಿಸುವುದು ಈ ಕಛೇರಿ ಸ್ಥಾಪನೆಯ ಮುಖ್ಯ ಉದ್ದೇಶವಾಗಿದೆ.

ಈ) ಸದರಿ ಕಛೇರಿಯು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಉ) ಉದ್ಭವಿಸುವುದಿಲ್ಲ.

ದಿನಾಂಕ 31/3/2003ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರ

ಮಂಡ್ಯ ಜಿಲ್ಲಾ ಪ್ಯಾಕೇಜ್‌ನಲ್ಲಿ ಕೈಗೊಂಡ ಕಾಮಗಾರಿಗಳು

2196 (2669) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ (ಎಂ.ಸಿ. ರಸ್ತೆ) ಮಂಡ್ಯ ಜಿಲ್ಲೆಯ ಪರಿಮಿತಿಯಲ್ಲಿ ಇರುವ ಅಂತರದ ರಸ್ತೆಯನ್ನು ಪ್ರಸಕ್ತ "ಮಂಡ್ಯ ಜಿಲ್ಲಾ ಪ್ಯಾಕೇಜ್" ಅಡಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಾ ಇದೆಯೇ;

ಆ) ಹಾಗಿದ್ದಲ್ಲಿ, ಇದರ ವಿವರಗಳೇನು; ಈ ಅಭಿವೃದ್ಧಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು;

ಇ) ಬೆಂಗಳೂರು-ಮೈಸೂರು ಮಧ್ಯದ ರಸ್ತೆಯಲ್ಲಿ ಮಂಡ್ಯ ನಗರದ ಹತ್ತಿರವಿರುವ ಹೆಬ್ಬಾಳದ ಮೇಲಿನ ಸೇತುವೆ, ಹಲಿಯೂರು ಸರ್ಕಲ್ ಬಳಿಯ ಕಾವೇರಿ ಶಾಖಾ ನಾಲೆಯ ಮೇಲಿನ ಸೇತುವೆ ಹಾಗೂ ಮದ್ದೂರು ಗೆಜ್ಜಲಗೆರೆ ಮಧ್ಯೆ ಇರುವ 23ನೇ ನಾಲೆಯ ಮೇಲಿನ ಸೇತುವೆ ಇವು ಕಿರಿದಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಈ ಸೇತುವೆಗಳನ್ನು ಅಗಲಗೊಳಿಸಿ ಬಲಪಡಿಸುವ ಅವಶ್ಯಕತೆಯನ್ನು ಸರ್ಕಾರ ಗಮನಿಸಿದೆಯೇ;

ಈ) ಗಮನಿಸಿದ್ದಲ್ಲಿ, ಸರ್ಕಾರವು ಈ ಬಗೆಗೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಹಾದು ಹೋಗುವ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ ನಂ. 17ರ ಸರಪಳಿ 71.20 ಕಿಮೀ ನಿಂದ 131.00 ಕಿಮೀ ವರೆಗೆ "ಮಂಡ್ಯ ಜಿಲ್ಲಾ ಪ್ಯಾಕೇಜ್" ಯೋಜನೆಯಡಿಯ ಪ್ರಥಮ ಹಂತದಲ್ಲಿ ಕೈಗೊಂಡಿದೆ. ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ರೂ. 766.00 ಲಕ್ಷ ಮೊತ್ತ ಮಂಜೂರಾಗಿದೆ.

ಇ) ಹೌದು.

ಈ) ಈ ಸೇತುವೆಗಳನ್ನು ಕೆ.ಆರ್.ಡಿ.ಸಿ.ಎಲ್. ಮತಿಯಿಂದ ತೆಗೆದುಕೊಳ್ಳಲಾಗುವ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಉದ್ಯೋಗ : ಉನ್ನತ ಶಿಕ್ಷಣದಲ್ಲಿ ಮೀಸಲಾತಿ

2197 (2670) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?